ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ. ನಾರಾಯಣಸ್ವಾಮಿ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ :

****

ವಿಷಯ: ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕೆಐಎಡಿಬಿ ಗೆ ಸರ್ಕಾರಿ ವಕೀಲರನ್ನು ನೇಮಿಸುವಾಗ ಯಾವುದೇ ಅರ್ಹತಾ ಪರೀಕ್ಷೆ ಇಲ್ಲದೆ, ಯಾವುದೇ ಮಾನದಂಡಗಳನ್ನು ರೂಪಿಸದೇ ಹಾಗೂ ಅನುಸರಿಸದೇ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಮೇಲ್ಕಂಡ ಸಂಸ್ಥೆಗಳಿಗೆ ನ್ಯಾಯಾಲಯಗಳಲ್ಲಿ ಬಹಳ ಹಿನ್ನಡೆಯಾಗುತ್ತಿರುವ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

*****

ಉತ್ತರ:

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ವಕೀಲರ ಪ್ಯಾನಲ್ ಪಟ್ಟಿ ಇದ್ದು, ಸದರಿ ವಕೀಲರಿಗೆ ಅವರ ಅನುಭವ ಹಾಗೂ ವಿಷಯ ಪರಿಣಿತಿ ಹಾಗೂ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಕರಣಗಳನ್ನು ಹಂಚಿಕೆ ಮಾಡಿ ವಹಿಸಲಾಗುತ್ತಿದೆ. ಅಲ್ಲದೇ, ಅತ್ಯಂತ ಗಂಭೀರ ಸ್ವರೂಪದ ಹಾಗೂ ಪ್ರಮುಖ ಪ್ರಕರಣಗಳಲ್ಲಿ ಮಂಡಳಿಯ ವಕೀಲರ ಜೊತೆಗೆ ಅಡ್ವೋಕೇಟ್ ಜನರಲ್, ಹಿರಿಯ ವಕೀಲರ ಸೇವೆ/ಸಲಹೆಯನ್ನು ಪಡೆದು ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಕ್ರಮವಹಿಸಲಾಗುತ್ತಿದೆ.

2. ಮಾನ್ಯ ಸರ್ವೋಚ್ಚ ನ್ಯಾಯಾಲಯ, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಕಲಬುರಗಿ ಮತ್ತು ಧಾರವಾಡ ಸೇರಿದಂತೆ ವಿವಿಧ ಹಂತದ ನ್ಯಾಯಾಲಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಪರವಾಗಿ ನ್ಯಾಯಾಲಯ ಪ್ರುರಕಣಗಳನ್ನು ನಿರ್ವಹಿಸಲು ವಕೀಲರ ಪ್ಯಾನಲ್ ಪಟ್ಟಿಯನ್ನು ದಿನಾಂಕ 29.08.2017 ರಂದು ಪರಿಷ್ಕರಿಸಲಾಗಿರುತ್ತದೆ.

3. ಮಂಡಳಿಯ ಪ್ಯಾನಲ್ ಪಟ್ಟಿಯಲ್ಲಿ ಅನುಭವಿ ವಕೀಲರುಗಳಿದ್ದು, ಅವರಿಗೆ ಪ್ರಕರಣಗಳನ್ನು ವಹಿಸಲಾಗುತ್ತಿದೆ. ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಭೂಸ್ವಾಧೀನ ಹಾಗೂ ಹಂಚಿಕೆ ವಿಷಯಗಳಿಗೆ ಸಂಬಂಧಿಸಿದಂತೆ 2,422 ಪ್ರಕರಣಗಳು ಇತ್ಯರ್ಥವಾಗಿದ್ದು, ಇವುಗಳಲ್ಲಿ ಮಂಡಳಿಯ ಪರ 2,132 ಪ್ರಕರಣಗಳು ಹಾಗೂ ಮಂಡಳಿಯ ವಿರುದ್ಧ 310 ಪ್ರಕರಣಗಳು ಇತ್ಯರ್ಥವಾಗಿರುತ್ತದೆ. ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿರುದ್ಧ ಇತ್ಯರ್ಥವಾದ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮ ವಹಿಸಲಾಗಿರುತ್ತದೆ.

4. ಮುಂದುವರೆದು, ಸರ್ಕಾರ ಮತ್ತು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಶೀಘ್ರುವಾಗಿ ಇತ್ಯರ್ಥಪಡಿಸುವ ನಿಟ್ಟಿನಲ್ಲಿ ಇಲಾಖಾ ಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು, ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರುಗಳು ಹಲವಾರು ಸಭೆಗಳನ್ನು ನಡೆಸಿ, ಮಂಡಳಿಯ ವಕೀಲರಿಗೆ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ.

5. ಈ ಹಿನ್ನಲೆಯಲ್ಲಿ ಮಂಡಳಿಗೆ ಸಂಬಂಧಪಟ್ಟ ನ್ಯಾಯಾಲಯದ ಪ್ರಕರಣಗಳು ಇತ್ಯರ್ಥವಾಗುವಾಗ ಹಾಗೂ ನಿರ್ವಹಿಸುವಾಗ ಮಂಡಳಿಗೆ ಯಾವುದೇ ಹಿನ್ನೆಡೆ ಆಗದಂತೆ ಸೂಕ್ತ ಮತ್ತು ಸಮಯೋಚಿತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸಿಐ 139 ಐಎಪಿ 2023

(ಎಂ.ಬಿ. ಪಾಟೀಲ)

ಬಹೃತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ

ಮೂಲಸೌಲಭ್ಯ ಅಭಿವೃದ್ಧಿ ಸಚಿವರು